ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ. ತಾವು ನಿನ್ನೆ ದಿವಸ ಸರ್ಕಾರಕ್ಕೆ ಒಂದು ಆದೇಶ ಕೊಟ್ಟಿದ್ದೀರಿ, ಏನೆಂದರೆ ಈ ರಾಜ್ಯದಲ್ಲಿ ನಡೆಯುತ್ತಿರತಕ್ಕಂಥ ದರೋಡೆಗಳ ಬಗ್ಗೆ ಸರ್ಕಾರ ಒಂದು ಹೇಳಿಕೆ ಕೊಡಬೇಕೆಂದು, ಅದು ಏನಾಯಿತು?

ಅಧ್ಯಕ್ಷರು : ಸೋಮವಾರ ಕೊಡುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ 10 ಸಾವಿರ ರೂಪಾಯಿಗಳಿಗಿಂತ ಕಡಿಮೆ ಇರುವ ರೈತರ ಸಾಲ ವಸೂಲಿ ಮಾಡುವುದು ಬೇಡ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಆದರೆ ನಾನು ಒಂದು ಬ್ಯಾಂಕಿನ ಅಧ್ಯಕ್ಷನಾಗಿ ಹೇಳುತ್ತಿದ್ದೇನೆ. ಇದುವರೆಗೂ ಸರ್ಕಾರದಿಂದ ಅಂತಹ ಒಂದು ಆದೇಶ ನಮಗೆ ಬಂದಿಲ್ಲ. ತಾವು ಆದೇಶ ಕೊಟ್ಟರೆ ಯಾರೂ ವಸೂಲಿ ಮಾಡುವುದಿಲ್ಲ. ಇಲ್ಲದಿದ್ದರೆ ನಮಗೆ ಆದೇಶ ಬಂದಿಲ್ಲ ಎಂದು ಅವರು ಸಾಲ ವಸೂಲಿ ಮಾಡುತ್ತಾರೆ. ತಾವು ಒಂದು ಆದೇಶವನ್ನು ಲಿಖಿತವಾಗಿ ಕಳುಹಿಸಿ ಕೊಡಿ. ಲಿಖಿತ ಆದೇಶವಿಲ್ಲದಿದ್ದರೆ ಏನೂ ಉಪಯೋಗವಾಗುವುದಿಲ್ಲ.

ಶ್ರೀ ಎಸ್.ಬಂಗಾರಪ್ಪ : ನನ್ನ ಉತ್ತರವನ್ನು ತಾವು ಪೂರ್ತಿ ಕೇಳಲಿಲ್ಲ, ಕೇಂದ್ರ ಸರ್ಕಾರದಿಂದ ನಮಗೆ ಆದೇಶ ಬಂದಿದೆ ಮತ್ತು ನಾನು ನನ್ನ ಬಜೆಟ್ ಭಾಷಣದಲ್ಲಿ ಸಹ ಸ್ಪಷ್ಟಪಡಿಸಿದ್ದೇನೆ. ಆ ಪ್ರಕಾರ ನಾವು ಆದೇಶ ಕಳುಹಿಸಿ ಕೊಡುತ್ತೇವೆ. ನೀವು ನಾನು ಹೇಳುವುದನ್ನು ಸರಿಯಾಗಿ ಕೇಳದೆ ವಾಟಾಳ ನಾಗರಾಜ್ ರವರ ಹತ್ತಿರ ಮಾತನಾಡಿಕೊಂಡು ಇದ್ದರೆ ಹೇಗೆ ತಿಳಿಯುತ್ತದೆ?

ಶ್ರೀ ವಾಟಾಳ ನಾಗರಾಜ್ : ಮಾನ್ಯ ಅಧ್ಯಕ್ಷರೇ ಇದು ಸತ್ಯಕ್ಕೆ ದೂರವಾದ ಮಾತು. ನಾನು ನಿಮ್ಮ ಮಾತನ್ನು ಕೇಳುತ್ತಿದ್ದೇನೆ. ಆದರೂ ಈ ರೀತಿ ಹೇಳಿದರೆ ಹೇಗೆ?

11.05 ಎ.ಎಂ

ಉಪಾಧ್ಯಕ್ಷರಾದ ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಗಮನ ಸೆಳೆಯುವ ಸೂಚನೆ

ಬೆಂಗಳೂರು ಅರಣ್ಯ ಭವನದಲ್ಲಿದ್ದ ಲಕ್ಷಾಂತರ ರೂ. ಮೌಲ್ಯದ ಆನೆಯ 2 ಬೃಹತ್ ದಂತಗಳು ಕಣ್ಮರೆಯಾಗಿರುವುದು.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ (ಸಂಕೇಶ್ವರ್) : ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಅರಣ್ಯ ಭವನದಲ್ಲಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಆನೆಯ ಎರಡು ಬೃಹತ್ ದಂತಗಳು ಕಣ್ಮರೆಯಾಗಿರುವ ಬಗ್ಗೆ ಅರಣ್ಯ ರಾಜ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಈ. ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೇ, 11-3-1991 ರಿಂದ ಬೆಂಗಳೂರು ಅರಣ್ಯ ಭವನದಲ್ಲಿರುವ 1ನೇ ಮಹಡಿಯಲ್ಲಿರುವ ಬೆಂಗಳೂರು ವೃತ್ತ ಅರಣ್ಯ ಸಂರಕ್ಷಣಾಧಿಕಾರಿಯವರ ಕೊಠಡಿಯಲ್ಲಿದ್ದ ಎರಡು ದಂತಗಳು ಕಳುವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಸದರಿ ಆನೆಯ ದಂತಗಳನ್ನು ಕೆತ್ತನೆ ಮಾಡಿದ್ದು ಒಂದು ಮರದ ಅಟ್ಟಣಿಗೆಯ(ಪ್ಲಾಟ್ ಫಾರಂ) ಮೇಲೆ ನಿಲ್ಲಿಸಿಡಲಾಗಿತ್ತು. ಕಳುವಾದ ಆನೆಯ ದಂತಗಳ ಮೌಲ್ಯ ಅಂದಾಜು ರೂ.35,000-00(ರೂಪಾಯಿಗಳು) ಮೂವತ್ತೈದು ಸಾವಿರ ಮಾತ್ರ) ಇರುತ್ತದೆ. ಈ ದಂತಗಳ ಹಾಗೂ ಒಂದು ತುರ್ತು ದೀಪದ (Emergency lamp). ಕಳ್ಳತನದ ಬಗ್ಗೆ

ಸದಾಶಿವನಗರದ ಅರಕ್ಷಕ ಠಾಣೆಯಲ್ಲಿ ಒಂದು ದೂರನ್ನು ನೋಂದಾಯಿಸಲಾಗಿದ್ದು ತನಿಖೆ ಮುಂದುವರೆದಿರುತ್ತದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಉಪಸಭಾಧ್ಯಕ್ಷೆಣಿಯವರೇ, ಅರಣ್ಯ ಭವನದಲ್ಲಿ ಇದ್ದಂಥ ಎರಡು ಆನೆ ದಂತಗಳು ಕಳುವಾಗಿರುವ ಬಗ್ಗೆ ಪೋಲೀಸ್ ಠಾಣೆಯಲ್ಲಿ ದೂರು ಕೊಡಲಾಗಿದೆಯೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಪೋಲೀಸ್ ಠಾಣೆಯಲ್ಲಿ ದೂರು ಕೊಟ್ಟರೆ ಕಳುವಾದ ಆನೆ ದಂತಗಳು ಸಿಗುವುದಿಲ್ಲ. ಇವತ್ತು ಬೆಂಗಳೂರಿನಲ್ಲಿರುವ ಅರಣ್ಯ ಭವನದಲ್ಲಿಟ್ಟಿದ್ದ ದಂತಗಳು ಕಳುವಾಗಿವೆ. ನಾಳೆ ದಿವಸ ಯಾರಾದರೂ ಎಂ.ಎಲ್.ಎ. ಗಳನ್ನೊ ಮುಖ್ಯ ಮಂತ್ರಿಗಳನ್ನೊ ಅಥವಾ ತಮ್ಮನ್ನೋ ಕದ್ದೊಯ್ದರೆ ಏನು ಮಾಡುತ್ತೀರಿ? ಪೋಲೀಸ್ ಠಾಣೆಗೆ ದೂರು ಕೊಡುತ್ತೀರೋ ಅಥವಾ ನಮಗೆ ರಕ್ಷಣೆ ಕೊಡುತ್ತೀರೋ? ಈ ದಂತಗಳ ಬೆಲೆ 35 ಸಾವಿರ ರೂಪಾಯಿ ಎಂದು ಅಂದಾಜು ಮಾಡಿದ್ದೀರಿ. ಯಾವ ರೀತಿ ಇದನ್ನು ಅಂದಾಜು ಮಾಡಿದಿರಿ? ಆ ದಂತಗಳನ್ನು ತೂಕ ಮಾಡಿದ್ರೊ ? ಅಥವಾ ಅಳತೆ ಮಾಡಿದ್ರೊ? ಇದರ ಬಗ್ಗೆ ವಿವರವಾದ ಟಿಪ್ಪಣಿ ಇದೆಯೇ ಎಂದು ತಿಳಿಸಬೇಕು ಹಾಗೂ ವಿವರವಾದ ಮಾಹಿತಿಯನ್ನು ನಮಗೆ ಒದಗಿಸಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಂ.ಪಿ.ವೆಂಕಟೇಶ್ : ಸನ್ಮಾನ್ಯ ಉಪಾಧ್ಯಕ್ಷೆಣಿಯವರೇ, ಅರಣ್ಯ ಮಂತ್ರಿಗಳು ಏನು ಉತ್ತರ ಕೊಟ್ಟಿದ್ದಾರೋ ಅದು ಸರಿಯಲ್ಲ. ಅದರ ಬೆಲೆ 35 ಸಾವಿರ ರೂಪಾಯಿಗಳಎಂದು ಅವರು ಹೇಳಿದ್ದಾರೆ. ಆದರೆ ಅದು ಲಕ್ಷಾಂತರ ರೂಪಾಯಿ ಬೆಲೆ ಭಾಳುತ್ತದೆ. ನಾನು ಅರಣ್ಯ ಭವನಕ್ಕೆ ಹೋಗಿದ್ದಾಗ ಅವುಗಳನ್ನು ನೋಡಿದ್ದೇನೆ. ಆ ಆನೆ ದಂತಗಳು ಬಹಳ ದೊಡ್ಡದಾಗಿದ್ದವು. ಆ ದಂತಗಳನ್ನು ಇಡುವುದಕ್ಕೆ ಮಾಡಿದ್ದ ಅಲಂಕಾರದ ಪೆಟ್ಟಿಗೆಯನ್ನು ಮಾಡಲಿಕ್ಕೇ 35 ಸಾವಿರ ರೂಪಾಯಿಗಳ ಖರ್ಚಾಗಿದ್ದಿರಬಹುದು. ಒಂದು ಆನೆಯ ಸಣ್ಣ ದಂತವೇ ಲಕ್ಷಾಂತರ ರೂಪಾಯಿ ಬೆಲೆ ಬಾಳುತ್ತದೆ. ಅರಣ್ಯ ಭವನದಲ್ಲಿಟ್ಟಿದ್ದ ಆನೆದಂತಗಳನ್ನು ವಾಚ್‌ಮನ್ ಇಟ್ಟು ಅದನ್ನು ಗಮನಿಸಲಿಲ್ಲವೆಂದರೆ ಇನ್ನು ಕಾಡಿನಲ್ಲಿ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಗಂಧದ ಮರಗಳನ್ನು ಹಾಗೂ ದಂತಗಳನ್ನು ಯಾವ ರೀತಿ ಕಾಪಾಡುತ್ತೀರೆಂದು ನೋಡಬೇಕಾಗುತ್ತದೆ.

ಇವರು ದೂರನ್ನು ಪೋಲೀಸ್ ಠಾಣೆಗೆ ಕೊಟ್ಟಿದ್ದಾರೆ. ನಾವು ಇದನ್ನು ಹುಡುಕಿಸಿದ್ದೇವೆ. ಪ್ರಯತ್ನ ಮಾಡಿದ್ದೇವೆ ಎನ್ನುವುದನ್ನು ವರದಿಯಲ್ಲಿ ಹೇಳಿಲ್ಲ. ಇದು 11ನೇ ತಾರೀಖು ಕಳ್ಳತನ ಆಗಿದೆ, ಇದು ಎಷ್ಟು ಕೇಜಿ ಆಗಿದೆ? ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇವರು ಉತ್ತರ ಕೊಡಬೇಕಾದರೆ ಎಷ್ಟು ಕೇಜಿ ಇತ್ತು? ಅದನ್ನು ಇಂತಹ ಕಡೆ ಇಟ್ಟಿದ್ದೇವೆ, ಇಷ್ಟು ಬೆಲ್ ಬಾಳುತ್ತದೆ ಎಂದು ಸುಳ್ಳು ಮಾಹಿತಿ ಕೊಟ್ಟಿದ್ದಾರೆ. ತಾವು ಆಗಲೇ ಬೆಲೆ ಹೊಡೆದರೆ ಹೇಗೆ ಉಪಾಧ್ಯಕ್ಷೆಣಿ ಅವರೇ? ನಾನು ಸುಮ್ಮನೆ ಅಲ್ಲಿ ಹೋಗಿ ಕುಳಿತುಕೊಳ್ಳಬೇಕಾಗುತ್ತದೆ. ನನಗೆ ಮಾತನಾಡುವುದಕ್ಕೆ ಅವಕಾಶಕೊಡದೆ ಹೋದರೆ ಕಷ್ಟ ಆಗುತ್ತದೆ. ಸುಮಾರು ಅರ್ಧ ಗಂಟೆ ಆದರೂ ಅವಕಾಶ ನನಗೆ ಕೊಡಬೇಕಾಗುತ್ತದೆ. ಯಾಕೆಂದರೆ ನಾವು ಏನೂ ಚರ್ಚೆ ಮಾಡದೇ ಸುಮ್ಮನೆ ಇದ್ದರೆ ಬೇರೆಯವನ್ನೂ ಕದ್ದುಕೊಂಡು ಹೋಗುತ್ತಾರೆ. ನಾಳೆ ವಿಧಾನ ಸಭೆಯಲ್ಲಿ ಇಟ್ಟಿದ್ದನ್ನು ಸಹ ಕದ್ದು ಕದ್ದುಕೊಂಡು ಹೋಗುತ್ತಾರೆ. ಟಿಪ್ಪು ಸುಲ್ತಾನ್ ಅರಮನೆಯಲ್ಲಿ ಏನಾದರೂ ಇಟ್ಟಿದ್ದರೆ ಅದನ್ನು ಕದ್ದುಕೊಂಡು ಹೋಗುತ್ತಾರೆ. ಅರಮನೆಯಲ್ಲಿ ಇಟ್ಟಿರತಕ್ಕ ಜನ್ನದ ಅಂಬಾರಿ ಅದನ್ನು ಸಹ ಕದ್ದುಕೊಂಡು ಹೋಗುತ್ತಾರೆ. ಪೋಲೀಸರು ಏನು ಮಾಡುತ್ತಿದ್ದರು? ಕಂಪ್ಲೆಂಟ್ ಕೊಟ್ಟು ಎಷ್ಟು ದಿವಸ ಆಯಿತು? ಅರಣ್ಯ ಇಲಾಖೆಯವರು ಏನು ಮಾಡುತ್ತಿದ್ದಾರೆ. ಇವತ್ತು ಅರಣ್ಯ ಇಲಾಖೆಯ ಟೈಗರ್ ಪ್ರಾಜೆಕ್ಟ್‌ನಲ್ಲಿ ಕೋಟ್ಯಾಂತರ ರೂಪಾಯಿಯ

ಮರ ಇದೆ. ಅರಣ್ಯ ಭವನದಲ್ಲಿ ಇರುವ ದಂತಗಳನ್ನು ಕಾಪಾಡದೇ ಹೋದರೆ ಇನ್ನು ಅರಣ್ಯವನ್ನು ಹೇಗೆ ಕಾಪಾಡುತ್ತಾರೆ. ಆದ್ದರಿಂದ ಸರಿಯಾದ ಉತ್ತರವನ್ನು ಇವರು ಈಗ ಕೊಡಬೇಕಾಗುತ್ತದೆ.

ಉಪಾಧ್ಯಕ್ಷರು: ಈಗ ತಾವು ಕ್ಲಾರಿಫಿಕೇಶನ್ ಕೇಳಬೇಕು.

ಶ್ರೀ ಎಂ.ಪಿ. ವೆಂಕಟೇಶ್ : ಈಗ ಎಷ್ಟು ಕೆ.ಜಿ. ಬೆಲೆ ಬಾಳುತ್ತದೆ. ಎಷ್ಟು ದಪ್ಪ ಎಷ್ಟು ಉದ್ದ ಇದೆ ಎನ್ನುವ ವಿವರಗಳನ್ನು ಕೊಡಬೇಕು ಬೇರೆ ದಂತಗಳು ಅಷ್ಟೇ ಉದ್ದ ಇದ್ದರೆ ಇದೇ ಬೆಲೆಗೆ ಕೊಡುತ್ತಾರೆಯೇ ಎಂದು ಸದನಕ್ಕೆ ವಿವರಣೆ ಕೊಡಬೇಕಾಗುತ್ತದೆ.

ಉಪಾಧ್ಯಕ್ಷರು: ಶ್ರೀಯುತ ಎಸ್.ಆರ್. ಮೋರೆಯವರು (ಸದ್ಯಸರ ಗೈರು ಹಾಜರಿ) ಶ್ರೀಯುತ ಹೆಚ್. ವಿಶ್ವನಾಥ್ ಅವರು (ಮಾನ್ಯ ಸದಸ್ಯರು ಗೈರು ಹಾಜರಿ)

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ಒಂದು ಪ್ರಶ್ನೆ ಬರುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ: ಇಲ್ಲಿ ಪ್ರಶ್ನೆ ಅರಣ್ಯ ಭವನದಲ್ಲಿ ಕಳ್ಳತನ ಆಗಿರತಕ್ಕದ್ದು ಅಲ್ಲ. ಅರಣ್ಯ ಪ್ರದೇಶದಲ್ಲಿ ದಂತದ ಕಳ್ಳತನಕ್ಕಾಗಿ ಒಂದು ವ್ಯವಸ್ಥಿತವಾದ ಜಾಲ ಇದೆ. ಈಗ ಗಂದದ ಸಾಗಾಣಿಕೆಯಲ್ಲಿ ವೀರಪ್ಪನ್‌ಅನ್ನು ಹಿಡಿಯುವುದಕ್ಕೆ ಸಾಧ್ಯ ಆಗಲಿಲ್ಲವೆಂದು ಹೇಳಿ ಆತ ತನ್ನ ವೃತ್ತಿ ಬದಲಾವಣೆ ಮಾಡಿಕೊಂಡು ಆನೆಯ ದಂತವನ್ನು ಹೊಡೆಯತಕ್ಕ ಪ್ರಯತ್ನವನ್ನು ಮಾಡಿದ್ದಾನೆಯೆ? ಆತನು ಏನಾದರೂ ಬೆಂಗಳೂರಿನಲ್ಲಿ ಇದ್ದಾನೆ ಎನ್ನುವ ಸುದ್ದಿ ಇತ್ತು ಈಗ ಇದರಲ್ಲಿ ಆತನ ಕೈವಾಡ ಎನಾದರೂ ಇದೆಯೇ? ಮೂಲತಃ ಸರ್ಕಾರದಿಂದ ಅರಣ್ಯ ಇಲಾಖೆಯಿಂದ ಏನು ಬಯಸುತ್ತೇವೆ? ಕಾಡಿನಲ್ಲಿರತಕ್ಕ ಆನೆಯನ್ನು ಮತ್ತು ಆನೆಗಳ ದಂತವನ್ನು ರಕ್ಷಣೆ ಮಾಡತಕ್ಕ ದೊಡ್ಡ ಜವಾಬ್ದಾರಿಯನ್ನು ನಿಮಗೆ ಕೊಟ್ಟು ಅದಕ್ಕೆ ಬೆಕಾದಂತ ಸಿಬ್ಬಂದಿ ವರ್ಗವನ್ನು ಕೊಟ್ಟಿದ್ದೇವೆ. ನೀವು ನಗರದಲ್ಲಿರತಕ್ಕ ದಂತವನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯ ಆಗದೇ ಇದ್ದರೆ ಕಾಡಿನಲ್ಲಿರತಕ್ಕ ದಂತವನ್ನು ಹೇಗೆ ರಕ್ಷಣೆ ಮಾಡುತ್ತೀರಿ? ಇದು ಒಂದನೇಯದು ಎರಡನೇಯದು ದೂರು ಯಾರು ಕೊಟ್ಟವರು? ಯಾವಗ ಕೊಟ್ಟರು? ಕಳ್ಳತನ ಯಾವಾಗ ಆಗಿತ್ತು? ಪತ್ತೆ ಯಾವಾಗ ಆಯಿತು? ಅಂದರೆ ಕಳ್ಳತನ ಆಗಿದ್ದು ಗೊತ್ತಾದದ್ದು ಯಾವಾಗ? ಈ ಹಿಂದೆ ಕೂಡ ಅರಣ್ಯ ಸಂರಕ್ಷಣಾಲಯದಲ್ಲಿ ಕಳ್ಳತನ ಆಗಿರುವುದು ಬಹಿರಂಗಕ್ಕೆ ಬರದೇ ಇರದಿದ್ದರೂ ಸಹ ಅತ್ಯಮೂಲ್ಯ ಕಳ್ಳತನ ನಡೆದಿದೆಯೆಂದು ತಿಳಿದುಬಂದಿದೆ. ನನಗೆ ಬೇಕಾಗಿರತಕ್ಕದ್ದು ಈ ಕಳ್ಳತನ ಆಗಿರತಕ್ಕ ಆನೆಯ ದಂತ ಯೂವುದು ಇದೆ ಅದರ ಒಟ್ಟು ತೂಕ ಎಷ್ಟು ಇದೆ? ಈ ಹಿಂದೆ ಬೆಲೆ ಏನು ಕಟ್ಟಿದ್ದಾರೆ. ಈಗ ತೂಕದಲ್ಲಿ ಕಡಿಮೆ ಯಾಗಿದೆಯೆ? ಕಳ್ಳತನ ಆದ ಮೇಲೆ ನನಗೆ ಗೊತ್ತಾಗುವುದಿಲ್ಲ ಆದ್ದರಿಂದ ದಯಮಾಡಿ ತಳಿಸಿ. ಇದು ಎಷ್ಟು ಇಂಚು ಉದ್ದ ಇತ್ತು ಮತ್ತು ಎಷ್ಟು ಕೆಜಿ ತೂಗುತ್ತಿತ್ತು. ಇವತ್ತು ಒಂದು ಕೆಜಿ ತೂಕದ ಬೆಲೆ ಏನು? ಆಮೇಲೆ ಬರೇ ಪೋಲೀಸ್ ಇಲಾಖೆಯವರಿಗೆ ಕಂಪ್ಲೆಂಟ್ ಕೊಟ್ಟ ಮಾತ್ರಕ್ಕೆ ಅರಣ್ಯ ಇಲಾಖೆಯವರು ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಗಕ್ಕೆ ಸಾಧ್ಯ ಇಲ್ಲ. ಇದರಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿಯವರ ಕೈವಾಡ ಇದೆಯೇ ಎನ್ನುವ ಶಂಕೆ ಏನು ಇದೆ ಇದನ್ನು ಪರಿಹರಿಸುವುದಕ್ಕೆ ನಿಮ್ಮ ಕಾರ್ಯಕ್ರಮ ಏನು?

ಶ್ರೀ ವಾಟಾಳ್ ನಾಗರಾಜ್: ನನಗೆ ಐದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು: ಇದು ಕಾಲಿ ಅಟೆನ್‌ಷನ್, ತಾವು ಸಿಗ್ನೇಟರಿ ಇದ್ದಿರಾ?

ಶ್ರೀ ವಾಟಾಳ್ ನಾಗರಾಜ್: ಇದು ಬಹಳ ಪ್ರಾಮುಖ್ಯವಾದ ವಿಚಾರ.

ಉಪಾಧ್ಯಕ್ಷರು: ತಾವು ಸೂಚನೆ ಕಳಿಸಿದ್ದೀರಾ? ತಮಗೆ ಗೊತ್ತಿದೆ, ತಾವು ಸೀನಿಯರ್ ಮೆಂಬರ್. ಕಾಲ್ ಅಟೆನ್ಷನ್ ಯಾರು ಸಿಗ್ನೆನಲೀಗೆ ಇರುತ್ತಾರೆ ಅವರು ಮಾತ್ರ ಮಾತನಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಹಾಗಿದ್ದರೆ ಅಟೆನ್ಷನ್ ಆದ ನಂತರ ಈ ಬಗ್ಗೆ ನಾನು ವಿಚಾರ ಹೇಳುವುದಕ್ಕೆ ನನಗೆ ಅವಕಾಶ ಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಈಗ ಸದನದ ಮಾನ್ಯ ಸದಸ್ಯರೆಲ್ಲರೂ ಸಹ ಈ ಕಳ್ಳತನದ ಬಗ್ಗೆ ಸಾಕಷ್ಟು ಆತಂಕವನ್ನು ವ್ಯಕ್ತಪಡಿಸಿದ್ದಾರೆ. ನಾನಾದರೂ ಮಾನ್ಯ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ ಏನೋ ಒಂದು ಕಡೆ ಸಣ್ಣ ಕಳ್ಳತನ ಆಗಿದ್ದರೆ ಇದನ್ನು ಬಿಟ್ಟುಬಿಡಬಹುದಾಗಿತ್ತು. ಆದರೆ ಅರಣ್ಯ ಭವನದಲ್ಲಿಯೇ? ಕಳ್ಳತನ ಆಗಿರುವುದರಿಂದ ಮತ್ತು ಅರಣ್ಯ ಭವನದಲ್ಲಿ ಈ ತರಹ ಸಂಪತ್ತು ಬಹಳ ಇದೆ, ದಂತಗಳು ಅಷ್ಟೇ ಅಲ್ಲ, ಆನೆ ಕಾಲುಗಳು ಮತ್ತು ಇವುಗಳನ್ನೆಲ್ಲಾ ಟ್ರೀಟ್‌ಮೆಂಟ್ ಮಾಡಿ ಇಟ್ಟಿರತಕ್ಕ ವಸ್ತುಗಳು. ಇದು ತಮಗೆ ಗೊತ್ತಿರ ಬಹುದು ಅನೇಕ ವನ್ಯ ಪ್ರಾಣಿಗಳು ಸತ್ತ ನಂತರ ಸಹ ಒಂದು ರೀತಿಯ ಟ್ರೀಟ್‌ಮೆಂಟ್ ಕೊಟ್ಟು ಅರಣ್ಯ ಭವನದಲ್ಲಿ ಇಟ್ಟಿರತಕ್ಕ ಅನೇಕ ವಸ್ತುಗಳಿವೆ ನನಗೆ ಗೊತ್ತಿರುವ ಹಾಗೆ ಎಲ್ಲಾ ಕಡೆ ಈ ರೀತಿ ಇಟ್ಟಿರುತ್ತಾರೆ. ನಾನು ಸಹ ಹರಾಜಿನಲ್ಲಿ ಒಂದೆರಡು ಆನೆ ಕಾಲುಗಳನ್ನು ತೆಗೆದುಕೊಂಡಿದ್ದೇನೆ. ಇದನ್ನು ಗಂಭೀರವಾಗಿ ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬೆಕು. ಅದಕ್ಕೆ ನಾನು ಏನು ಒತ್ತಾಯ ಮಾಡುತ್ತೇನೆಂದರೆ ಪೋಲೀಸ್ ಕಂಪ್ಲೈಂಟ್ ಕೊಟ್ಟಿರತಕ್ಕದನ್ನು ಏನು ಇದೆ ಅದು ಕಾನೂನು ಪ್ರಕಾರವಾಗಿ ನಡೆದುಕೊಂಡು ಹೋಗುತ್ತದೆ. ನೀವು ತಕ್ಷಣ ಇದನ್ನು ಸಿ.ಓ.ಡಿ. ಎನ್‌ಕ್ವಯಿರಿ ರೆಫರ್ ಮಾಡಿ ತನಿಖೆಗೆ 15 ದಿವಸ ಅಥವಾ 20 ದಿನ ಎಂದು ಗೊತ್ತುಮಾಡಿ ತಮಗೆ ಗೊತ್ತಿರುವಹಾಗೆ ಗಂಧದ ಒಂದು ಮರ ಏನು ಇದೆ ದಂತ ಏನು ಇದೆ, ಇವೆಲ್ಲಾ ಬಹಳ ಬೆಲೆ ಬಾಳುತ್ತವೆ. ಆದ್ದರಿಂದ ಈ ರೀತಿ ನಡೆದಿರಬೇಕಾದರೆ ಯಾವುದಲ್ಲಾ ಹಿಂದೆ ಹಂತದಲ್ಲಿ ಅಲ್ಲಿ ಕೆಲಸ ಮಾಡತಕ್ಕಂಥವರಾದ ಅಟೆಂಡರ್ ಆಗಿರಬಹುದು, ಕಛೇರಿಯ ಸೂಪರ್‌ವೈಸರ್ ಆಗಿರಬಹುದು, ಅಂಥವರ ಶಾಮೀಲು ಇಲ್ಲದೆ ಈ ಕೆಲಸಗಳು ಆಗುವುದಿಲ್ಲ. ಆದುದರಿಂದ ತಕ್ಷಣ ಇದನ್ನು ಸಿ.ಓ.ಡಿ ವಿಚಾರಣೆಗೆ ಒಪ್ಪಿಸಬೇಕು. ಆಗ ಸತ್ಯ ಹೊರಗಡೆ ಬರುತ್ತದೆ. ಆದುದರಿಂದ ದಯಮಾಡಿ ಮಾನ್ಯ ಸಚಿವರು ಈ ಕ್ರಮ ತೆಗೆದುಕೊಳ್ಳುತ್ತೀರಾ ಎಂಬ ಬಗ್ಗೆ ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳೇ ಉತ್ತರಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಣೆಯವರೆ ಈ ವಿಚಾರ ಮುಗಿದನಂತರ ಬಹಳ ಗಹನವಾದಂಥ ಒಂದು ವಿಚಾರವನ್ನು ಸಬೆಯ ಗಮನಕ್ಕೆ ತರಬೇಕೆಂದಿದ್ದೇನೆ. ಅದೇನೆಂದರೆ ವೀರಪ್ಪನ್ ವಿಚಾರದಲ್ಲಿ

ಶ್ರೀ ಬಿ.ಹೆಚ್. ಬನ್ನಿಕೋಡ್ : ಯಾವ ವೀರಪ್ಪನ್? ಅಡವಿಯಲ್ಲಿರುವವನೋ, ಉರಿನಲ್ಲಿರುವವನೋ?

ಗೊಂದಲ

ಉಪಾಧ್ಯಕ್ಷಣೆಯವರು : ನಾನು ಮಂತ್ರಿಯವರಿಗೆ ಮಾತನಾಡಲು ಹೇಳಿದ್ದೇನೆ ಉಳಿದವರು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಈ.ಟಿ. ಶಂಭುನಾಥ್ : ಮಾನ್ಯ ಸಭಾಧ್ಯಕ್ಷಣೆಯವರೆ, ಒಂದು ಎಡಗಡೆ ಇದ್ದಂಥ ದಂತದ ಉದ್ದ 137 ಸೆಂಟಿ ಮೀಟರ್, ಗರ್ತೆ, 37 ಸೆಂಟಿ ಮೀಟರ್ ತೂಕ 18 ಕೆ.ಜಿ. ರೈಟ್ ಸೈಡ್‌ಲೆಂಥ ಇದ್ದದರ 134 ಸೆಂಟಿ ಮೀಟರ್ ಗರ್ತೆ 37 ಸೆಂಟಿ ಮೀಟರ್ ಉದ್ದ 0.36 ಗರ್ತೆ ಸೆಂಟಿ ಮೀಟರ್ 17 ಕೆ.ಜಿ. ತೂಕ ಇರುತ್ತದೆ.

ಒಟ್ಟು ತೂಕ 35.6 ಕೆ.ಜಿ. ತೂಕ ಇರುತ್ತದೆ. ಈಗ ಇಡೀ ಪ್ರಪಂಚದಲ್ಲಿ ಮತ್ತು ಭಾರತದಲ್ಲಿ ಈ ದಂತವನ್ನು ನಿಷೇಧಿಸಿರುವುದರಿಂದ ಅದರ ಬೆಲೆ ಎಷ್ಟು ಎಂದು ನಿಗದಿಪಡಿಸುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಅಂದಾಜು ಕೆ.ಜಿ. ದಂತದ ಬೆಲೆ ಒಂದು ಸಾವಿರ ರೂಪಾಯಿಗಳಷ್ಟು ಆಗಬಹುದು ಎಂಬ ಆಧಾರದ ಮೇಲೆ 35 ಸಾವಿರ ರೂಪಾಯಿಗಳು ಎಂದು ತಿಳಿಸಿದ್ದೇನೆ. ಅದರ ಹೊರತಾಗಿ ಈ ಕುರುತು ಬೇರೆ ವ್ಯತ್ಯಾಸ ಇಲ್ಲ. ಆ ಕಛೇರಿಯ ಅಟೆಂಡರ್ ಪೀವನ್‌ಗಳನ್ನು ವಿಚಾರಣೆಗೆ ಒಳಪಡಿಸುತ್ತಾ ಇದ್ದೇನೆ. ಇಬ್ಬರು, ಮೂವರನ್ನು ಸಸ್ಪೆಂಡ್ ಮಾಡಿದ್ದೇವೆ. ಮತ್ತು ಇಲಾಖಾ ತನಿಖೆ ಕೂಡ ನಡೆಯುತ್ತಿದೆ.

ಶ್ರೀ ಬಸವರಾಜ್ ರಾಯರೆಡ್ಡಿ : ಸಸ್ಪೆಂಡ್ ಮಾಡಿದವರು ಯಾರು ಎಂದು ಸ್ಪಷ್ಟವಾಗಿ ತಿಳಿಸಬಹುದಲ್ಲ? ಇಬ್ಬರು ಮೂವರು ಅಂದರೆ ಹೇಗೆ?

ಶ್ರೀ ಈ.ಟಿ. ಶಂಭುನಾಥ : ಮಾನ್ಯ ಸದಸ್ಯರು ಮೊದಲು ನಾನು ಹೇಳುವುದನ್ನು ಕೇಳಬೇಕು ಆಮೇಲೆ ಅವರು ಮಾತನಾಡಬಹುದು. ನಾವು ಈಗಾಗಲೇ ಆ ವಿಚಾರದಲ್ಲಿ ಸೂಕ್ತ ತನಿಖೆ ನಡೆಸುತ್ತಾ ಇದ್ದೇವೆ. ಆ ಛೇಂಬರ್‌ಗೆ ಸಂಬಂದಪಟ್ಟಂಥ ಕನ್ಸರ್‌ವೇಟರ್‌ರವರು 7ನೇ ತಾರೀಖು ಟೂರ್‌ಗೆ ಹೋಗಿದ್ದರು. 8ನೇ ತಾರೀಖಿನಿಂದ ರಜೆ ಹಾಕಿದ್ದರು. 9-10 ತಾರೀಖಿನಂದು ಕೂಡ ರಜೆ ಇತ್ತು ಅದಕ್ಕಾಗಿ ಅವರು 11ನೇ ತಾರೀಖು ಬೆಳಿಗ್ಗೆ ಕಚೇರಿಗೆ ಬಂದಾಗ ಅವರಿಗೆ ಈ ವಿಚಾರವು ಗೊತ್ತಾಗಿದೆ. ಅವರು ಅಲ್ಲಿ ಕೆಲಸದಲ್ಲಿದ್ದಂತ ಪೀವನ್‌ನ್ನು ಕೇಳಿದಾಗ ಹೌದು ಸ್ವಾಮಿ ಕಳವು ಆಗಿದೆ. ಎಂದು ಹೇಳಿದ್ದಾನೆ. ಕಳವು ಆಗಿದೆ ಎಂದಾದರೆ ಮೊದಲೇ ಯಾರಿಗೆ ಏಕೆ ತಿಳಿಸಿಲ್ಲ ಎಂದು ಹೇಳಿ ಆ ಪಿವನ್‌ನನ್ನು ಆಗಲೇ ಸಸ್ಪೆಂಡ್ ಮಾಡಿದ್ದಾರೆ. ಈ ವಿಚಾರಣೆಗಾಗಿ ಒಬ್ಬ ಎ.ಸಿ.ಎಫ್.ರವರನ್ನು ನೇಮಕ ಮಾಡಿ ಇಲಾಖಾ ವಿಚಾರಣೆ ನಡೆಸುವುದಕ್ಕೆ ಹಾಕಿದ್ದೇವೆ. ಇದರಲ್ಲಿ ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ಅಲ್ಲಿರುವವರ ಕೈವಾಡ ಇದೆ. ಇದು ಪೋಲೀಸ್ ಮೂಲಗಳಿಂದಲೂ ಗೊತ್ತಾಗಿದೆ. ಇದರ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಂಡು ಆದಷ್ಟು ಜಾಗೃತೆ' ತಪ್ಪಿತಸ್ಥರನ್ನು ಬಯಲಿಗೆಳೆಯಲು ಪ್ರಯತ್ನಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಯಾರೋ ಇಬ್ಬರು ಮೂವರು ಜವಾನರನ್ನು ಸಸ್ಪೆಂಡ್ ಮಾಡುವುದರ ಮೂಲಕ ಈ ಸಮಸ್ಯೆಯು ಪರಿಹಾರವಾಗುವುದಿಲ್ಲ. ನನ್ನ ಸಂಶಯದ ಪ್ರಕಾರ ವೀರಪ್ಪನ್ ಈ ಕೆಲಸ ಮಾಡಿರಬಹುದು. ಅದಕ್ಕಾಗಿ ಈ ಬಗ್ಗೆ ಒಂದು ಸಮಗ್ರವಾದ ತನಿಖೆಯನ್ನು ಸರಕಾರದ ಪರವಾಗಿ ನಡೆಸ ಬೇಕು. ಇದನ್ನು ಅಷ್ಟು ಲಘುವಾಗಿ ತಿಳಿದುಕೊಳ್ಳತಕ್ಕಂಥದ್ದು ಅಲ್ಲ ಅರಣ್ಯ ಭವನಕ್ಕೆ ವೀರಪ್ಪನ್ ಏತಕ್ಕೆ ಬಂದಿರಬಾರದು? ಈಗಾಗಲೇ ಅನೇಕ ಸಾರಿ ಪತ್ರಿಕೆಗಳಲ್ಲಿ ಕೂಡ ಬಂದಿದೆ. ವೀರಪ್ಪನ್ ಬೆಂಗಳೂರಿನ ಆ ಸರ್ಕಲ್‌ನಲ್ಲಿ ಇದ್ದ, ಈ ಸರ್ಕಲ್‌ನಲ್ಲಿದ್ದ ಪೋಲೀಸರು ಆತನನ್ನು ಚೇಸ್ ಮಾಡಿದರು, ಅವನು ತಪ್ಪಿಸಿಕೊಂಡ ಎಲ್ಲೋ ಹೋದ ಎಂಬುದಾಗಿ ಕೇಳಿದ್ದೇವೆ. ಆದುದರಿಂದ ಯಾರೋ ಮೂವರು ಜವಾನರನ್ನು ಸಸ್ಪೆಂಡ್ ಮಾಡುವುದರಿಂದ ಪ್ರಯೋಜನವಾಗಲಾರದು. ಇದಕ್ಕೆ ಸಮಗ್ರವಾದಂಥ ಒಂದು ತನಿಖೆಯಾಗ ಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿದ್ದಾರೆ. ಇದನ್ನು ಸಿ.ಓ.ಡಿ. ತನಿಖೆಗೆ ಒಪ್ಪಿಸಿ ಇದರ ಹಿನ್ನೆಲೆಯನ್ನು ತಿಳಿದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್: ನನ್ನ ತಿಳುವಳಿಕೆ ಪ್ರಕಾರ ಇದೊಂದು ಸರಕಾರಕ್ಕೆ ಕೆಟ್ಟ ಹೆಸರು ತರಲು ಕೂಡ ಪ್ರಯತ್ನ ನಡೆದಿರಬಹುದು, ಒಳ್ಳೆಯ ಕೆಲಸ . ನಡೆಯುತ್ತಿರುವಾಗ ಒಂದೊಂದು ಸಲ ಏನಾದರೂ ಕಿತಾಪತಿ ಮಾಡಿ ಇಲಾಖೆಗೆ ಕೆಟ್ಟ ಹೆಸರು ಬರುವಂತೆ ಕೆಲವರು ಪ್ರಯತ್ನ ನಡೆಸಿರಬಹುದು. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಯಾವ ಅಧಿಗಾರಿಗಳು ಯಾವ ಸಿಬ್ಬಂದ್ದಿ ವರ್ಗದವರು ಇದರಲ್ಲಿ ತಪ್ಪು ಮಾಡಿದ್ದಾರೆ ಅವರ ಮೇಲೆ

ಯೋಗ್ಯ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆ ದಿಶೆಯಲ್ಲಿ ಸರಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಂಡು ಯಾರು ತಪ್ಪಿತಸ್ಥರು ಇದ್ದಾರೆ ಅವರನ್ನು ಹೊರತರಬೇಕೆಂದು ಕೇಳಿಕೊಳ್ಳುತ್ತೇನೆ. ಆ ಮೇಲೆ ಸಿ.ಓ.ಡಿ. ಎನ್‌ಕ್ವಯಿರಿ ಮಾಡಬೇಕೆಂದು ಮಾನ್ಯ ಸಿಂಧ್ಯಾರವರು ಹೇಳಿದ್ದಾರೆ. ಪ್ರತಿಯೊಂದನ್ನು ಸಿ.ಓ.ಡಿ. ಎನ್‌ಕ್ವಯಿರಿ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕೇಳುತ್ತಿದ್ದೇನೆ. ಇದು ಸಿ.ಓ.ಡಿ. ಎನ್‌ಕ್ವಯಿರಿ ಮಾಡೋದ್ರಿಂದ ಒಳ್ಳೆಯದು ಆಗುತ್ತದೋ ಅಥವಾ ಇಲಾಖಾ ತನಿಖೆ ಮಾಡುವುದರಿಂದ ಒಳ್ಳೆಯದಾಗುತ್ತದೋ ಅನ್ನೋದನ್ನು ತಾವು ನಿರ್ಧಾರ ಮಾಡಬೇಕು. ಪೋಲೀಸ್ ಇಲಾಖೆ ಇದನ್ನು ಒಂದೊಂದು ಸಲ ಬಹಳ ಲೈಟಾಗಿ ತೆಗೆದುಕೊಳ್ಳುತ್ತದೆ. ಇದು ಬೊಂಗಳೂರಿನಲ್ಲಿ ನಡೆದ ಕೃತ್ಯ ಒಂದು ದಿನ ದಂತ ಹೋಗಬಹುದು, ಮತ್ತೊಂದು ದಿನ ಮುಖ್ಯಮಂತ್ರಿಗಳ ಮನೆಗೆ ನಾವು ಹೋಗುತ್ತೇವೆ. ಆಗ ನಮ್ಮ ಮೇಲೆ ಅವರ ಮೇಲೆ ಕೂಡ ಇಂತಹ ಕಾರ್ಯಕ್ರಮ ನಡೆಯಬಹುದು. ಆ ದೃಷ್ಟಿಯಿಂದ ತಾವು ಯೋಚನೆ ಮಾಡಬೇಕು ಆದ್ದರಿಂದ ಮುಖ್ಯಮಂತ್ರಿಗಳನ್ನು ಕೇಳ್ತೀನಿ ಪ್ರತಿಯೊಂದು ಹಂತದಲ್ಲಿ ಕೂಡ ವಿಶೇಷವಾದ ಒಂದು ದಳ ಮಾಡಿ ಎಲ್ಲಿ ಎಲ್.ಹೆಚ್. ಇದೆ, ಅಸೆಂಬ್ಲಿ ಇದೆ ಎಲ್ಲಿ ಮುಖ್ಯಮಂತ್ರಿಗಳ ಮನೆ ಇದೆ ಅಂತಹ ಕಡೆ ತಾವು ವಿಶೇಷವಾದ ದಳವನ್ನು ನಿಗದಿ ಮಾಡಬೇಕಾಗುತ್ತದೆ. ಇದರ ಹಿನ್ನೆಲೆಯಲ್ಲಿ ಇದು ಗಲಾಟೆ ಕೂಡ ಸಂದರ್ಭ ಒದಗುವುದರಿಂದ ವಿಶೇಷ ದಳ ರಚನೆ ಮಾಡಬೇಕು. ದಳ ಎಂದರೆ ಜನತಾದಳ ಅಲ್ಲ ವಿಶೇಷವಾದ ತನಿಖಾದಳ ರಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಇಲ್ಲಿ ಕಳ್ಳತನ ಆಗಿದೆ ಈ ಹಿನ್ನೆಲೆಯಲ್ಲಿ ಕೇವಲ ಮೂರು ಜನರ ಜವಾನರನ್ನು ಸಸ್ಪೆಂಡ್ ಮಾಡಿದರೆ ಉಪಯೋಗವಾಗೋದಿಲ್ಲ ಇಲ್ಲಿ ಮುಖ್ಯವಾಗಿ ಈ ಕಚೇರಿಯಲ್ಲಿ ಟೆಂಪರ್ವರಿ ಆಫೀಸಿಯಲ್ಸ್ ಇದ್ದಾರೆ. ಹೀಗಿರುವಾಗ ಅಧಿಕಾರಿಗಳು ಪಾತ್ರವೇನು? ಜವಾನ ಏನು ತೆಗೆದುಕೊಂಡು ಹೋಗುತ್ತಾನೆ. ಅಲ್ಲಿರುವ ಅಧಿಕಾರಿಗಳು ಯಾರೇ ತೆಗೆದುಕೊಂಡು ಹೋಗಬಾರದು ಅದರ ಸಲೂವಾಗಿ ಈಗಾಗಲೇ ಸಿಂಧ್ಯಾರು ಹೇಳಿದಂತೆ ಸಿ.ಓ.ಡಿ. ಎನ್‌ಕ್ವಯಿರಿ ಮಾಡಿದರೆ ನಿಜವಾದ ಸತ್ಯ ಹೊರಬೀಳುತ್ತದೆ. ತಾವು ಇಲಾಖೆ ತನಿಖೆ ಮಾಡಿದರೆ ಇದು ಸಾಧ್ಯವಿಲ್ಲ ಇಲಾಖೆಯ ಹಿರಿಯ ಅದಿಕಾರಿ ತನಿಖೆ ಮಾಡ್ತಾರೆ Naturally they have to protect own officers ಆದ್ದರಿಂದ ಕೇವಲ ಮೂರು ಜನ ಜವಾನರನ್ನು ಸಸ್ಪೆಂಡ್ ಮಾಡಿ ಈ ಸಮಸ್ಯೆ ಬಗೆಹರಿಸೋಕಾಗಲ್ಲ ತಾವು ಸಿ.ಓ.ಡಿ. ಎನ್‌ಕ್ವಯಿರಿ ಮಾಡಿಸಬೇಕು ಮತ್ತು ಅಲ್ಲಿ ಯಾರು ಟೆಂಪರ್ವರಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಮೇಲೆ ಮತ್ತು ಅಲ್ಲಿನ ಅಧಿಕಾರಿಗಳ ಮೇಲೂ ಎನ್‌ಕ್ವಯಿರಿ ಮಾಡಿಸಬೇಕು.

ಶ್ರೀ ಎಂ.ಪಿ. ವೆಂಕಟೇಶ್ : 9ನೇ ತಾರೀಖು 10ನೇ ತಾರೀಖು ಸಂರಕ್ಷಣಾಧಿಕಾರಿಗಳು ಟೂರು ಹೋಗಿದ್ರಾರೆ ಎಂದರು. ಅವರು ಟೂರು ಹೋದರೆ ಬೀಗ ಏಕೆ ತೆಗೆಯಬೇಕು. ಬೀಗ ಹಾಕಬಹುದಾಗಿತ್ತು. ಅಲ್ಲಿ ಸಂಬಂಧಪಟ್ಟ ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್‌ಗಳು ಇದ್ದು. ಅವರಿಗೆ ಬೇಕಾದಷ್ಟು ಜವಾಬ್ದಾರಿ ಇರುತ್ತದೆ. ಆ ಆಫೀಸಿನಲ್ಲಿ ಮುಖ್ಯವಾದಂಥ ಫೈಲ್‌ಗಳಿರುತ್ತವೆ. ಅದನ್ನು ಇವರು ಏಕೆ ನೋಡಲಿಲ್ಲ? ಎರಡನೆಯದಾಗಿ, ಬಹಳ ಮುಖ್ಯವಾದ ಅರಣ್ಯಾಧಿಕಾರಿಗಳ ವರ್ಗಾವಣೆಗೆ ಅವರದೇನೂ ಪಾತ್ರ ನಡೆದಿಲ್ಲ. ಬರೀ ವಿಧಾನಸೌಧಕ್ಕೆ ಬರೋವಂಥದ್ದೆ ನಡೆದಿದೆ. ಕಳೆದ ಸಲವೂ ಇದೇ ರೀತಿ ನಡೆದಿರುವ ಕಾರಣ ಅವರೆಲ್ಲ ಸೇರಿ ನಮಗೆ ಒಳ್ಳೆಯ ಸಿಕ್ಕಲ್ಲ. ಆದ್ದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರೋ ಹಂಗೆ ಮಾಡೋಣ, ಈ ರೀತಿ ಆದರೆ ರಾಜೀನಾಮೆ ಕೇಳ್ತಾರೆ, ಏನೋ ಒಂದು ಆಗಲಿ ಅಂತ ಏಕೆ ಮಾಡಿರಬಾರದು? ಇದೆಲ್ಲ ಅಲ್ಲಿನ ಎಲ್ಲ ಅಧಿಕಾರಿಗಳು ಸೇರಿ ಆಗಿದೆ. ಆದ್ದರಿಂದ ಇದರ ಬಗ್ಗೆ

ಕೂಡಲೇ ಸಿ.ಓ.ಡಿ. ತನಿಖೆಯಾಗಬೇಕು, ತನಿಖೆಯಾಗದೇ ಹೋದರೆ, ನನ್ನ ಕ್ಷೇತ್ರದಲ್ಲಿ ಕೋಟ್ಯಾಂತರ ರೂ. ಮರಗಳಿವೆ ಎಲ್ಲ ಕದ್ದುಕೊಂಡು ಹೊರಟುಹೋಗ್ತಾರೆ, ಯಾರು ಕೇಳೋರು? ಅರಣ್ಯ ಇಲಾಖೆ ದಂತೆ ಹೊಡ್ಕೊಂಡು ಹೋದ್ರೆ ಯಾರೂ ಕೇಳಲಿಲ್ಲ. ಪೋಲೀಸ್ ಆಕ್ಷನ್ ಆಗಲಿಲ್ಲ, ಸರ್ಕಾರದಿಂದ ಆಕ್ಷನ್ ಆಗಿಲ್ಲವಾದ್ದರಿಂದ ನಾವು ಮರ ಹೊಡ್ಕೊಂಡು ಹೋಗೋಣ ಅಂತ ಮಾಡ್ತಾರೆ, ಹಾಗಿದ್ದರೆ ಮಾಡ್ಲಿಬಿಡಿ ಆದ್ರಿಂದ ಬಹಳ ಜವಾಬ್ದಾರಿಯಾಗಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ಕಾಡನ್ನು ಮರಲೂಟಿ ಹೊಡ್ಕೊಂಡು ಹೋಗ್ತಾರೆ. ನೀವು ಅರಣ್ಯವನ್ನು ರಕ್ಷಣೆ ಮಾಡೋಕಾಗಿಲ್ಲ ಅಂತ ನಾಳೆ ಜನರು ಕೇಳ್ತಾರೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಉಪಾಧ್ಯಕ್ಷಿಣಿಯವರೇ, ಮಂತ್ರಿಗಳ ಭಾಗದಲ್ಲಿ ಪಾಗೂ ನಮ್ಮ ಭಾಗದಲ್ಲಿ ಈಗ ನಕ್ಸಲೈಟ್ಸ್ ಹಾವಳಿ ಜಾಸ್ತಿಯಾಗಿರೋ ಕಾರಣ ನನಗೆ ಸಂಶಯ ಬರ್ತದೆ, ನಾಳೆ ಸಚಿವರನ್ನೇ ಹೊತ್ಕೊಂಡು ಹೋಗಿಬಿಟ್ರೆ ಹೇಗೆ ಅಂತ.

ಉಪಾಧ್ಯಕ್ಷರು : ಈಗ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ : ಇಲ್ಲಿ ಕಳ್ಳತನ ಆಗಿದೆ ಅನ್ನೋದು ನಿರ್ವಿವಾದ, ಆಗಿಲ್ಲ ಅಂತ ಏನೂ ಹೇಳಿಲ್ಲ ಆಗುವುದು ಆಗಿದೆ. ಅದಕ್ಕಾಗಿ ಅಲ್ಲಿರುವ ಎರಡು ಮೂರು ಜನ ಕಾವಲುಗಾರರೋ ಅಥವಾ ಜವಾನರನ್ನೋ ಸಸ್ಪೆಂಡ್ ಮಾಡಿದ್ದೇವೆಂದು ಸಚಿವರು ಆಗಲೇ ಹೇಳಿದ್ದಾರೆ. ಅದಕ್ಕೆ ಇಲಾಖೆ ತನಿಖೆ ಬಗ್ಗೆ ಕೂಡ ಪ್ರಸ್ತಾಪಿಸಿದ್ದಾರೆ. ಇಲ್ಲಿರುವ ಪ್ರಶ್ನೆ ತನಿಖೆ ಯಾವ ರೀತಿ ಮಾಡಬೇಕು ಅನ್ನೋದು ಇಲಾಖಾ ತನಿಖೆಯೇ ರೆಗ್ಯುಲರ್ ಪೋಲಿಸ್ ತನಿಖೆಗೆ ವಹಿಸಬೇಕೇ ಅಥವಾ ಸಿ.ಓ.ಡಿ.ಗೆ ವಹಿಸಬೇಕೇ ಇತ್ಯಾದಿ ಸಲಹೆಗಳು ಬರುವುದು ಸಹಜವಾದ ಸಂದರ್ಭ ಇದು.

ಈ ಸಂದರ್ಭದಲ್ಲಿ ಇಲಾಖೆಯ ತನಿಖೆಯು ಆದರೆ ತಪ್ಪು ಎನ್ನತಕ್ಕಂಥ ಪ್ರಶ್ನೆ ಅಲ್ಲ. ಏಕೆಂದರೆ ನಾವು ಎಷ್ಟೋ ಸಾರಿ ಅಲ್ಲಿ ಡಿಪಾರ್ಟ್‌ಮೆಂಟಲ್ ಎನ್‌ಕ್ವಯರಿ ನಡೆಯುತ್ತಿದೆ. ಎಂದು ಹೇಳಿ ಆ ಪದ್ಧತಿಯನ್ನು ಇಟ್ಟುಕೊಂಡು ಬಂದಿದ್ದೇವೆ. ಅಷ್ಟು ಸಾಕು ಅಂದರೆ depending upon the the gravity of the situation and the nature of the alleged offence committed.

ಅದಕ್ಕೆ ಸಂಬಂಧಪಟ್ಟ ಹಾಗೆ, ಇಲ್ಲಿ ಅದು ಸಾಲದು ಎನ್ನತಕ್ಕಂಥ ಅಭಿಪ್ರಾಯವನ್ನು ತಾವುಗಳು ವ್ಯಕ್ತಪಡಿಸಿದ್ದೀರಿ. ಮತ್ತು ಲೋಕಲ್ ಪೋಲೀಸ್ ಬೇಡ ಎನ್ನತಕ್ಕಂಥ ಅಭಿಪ್ರಾಯ ಇದರ ಬಗ್ಗೆ ತಾವು ಹೆಚ್ಚು ಹೇಳದಿದ್ದರೂ ಕೂಡಾ ಸಿ.ಓ.ಡಿ.ಗೆ ವಹಿಸಿಬೇಕು. ಎಂದರೇನು? ಲೋಕಲ್ ಪೋಲೀಸ್ ಬೇಡ ಎಂದು ಅದರ ಅರ್ಥವಾಗುತ್ತದೆ. ತಾವು ಯಾರೂ ಹೇಳದಿದ್ದರೂ ಕೂಡಾ ಸಿ.ಓ.ಡಿ.ಗೆ ಒಂದೇ ಸಾರಿ ಇಲ್ಲಿಗೆ ಜಂಪ್ ಆಗಿದೆ. ಹಾಗಿದ್ದರೆ ಲೋಕಲ್ ಪೋಲೀಸ್ ಏನು ಮಾಡಬೇಕು ಎನ್ನತಕ್ಕಂಥ ವಿಚಾರವನ್ನು ಹೆಚ್ಚೇನೂ ಹೇಳಿದ ಹಾಗೆ ಕಾಣಲಿಲ್ಲ. ಆದರೂ ಕೂಡಾ ಮಲ್ಲಾರಿಗೌಡ ಪಾಟೀಲರು ಅದನ್ನು ಪ್ರಸ್ತಾಪ ಮಾಡಿದರು. ತನಿಖೆಯನ್ನು ಹೇಗೆ ಮಾಡಬೇಕು ಎಂದು ಹೇಳಿ ಈ ನಮೂನೆಯಲ್ಲಿ ತನಿಖೆಗಳಿವೆ ಎನ್ನತಕ್ಕಂಥ ಮಾತನ್ನು ಜನರಲ್ ಆಗಿ ಹೇಳಿದರು. ನಮ್ಮ ಕಛೇರಿಗಳಲ್ಲಿಯೇ ಈಚೆಗೆ ಕಳ್ಳತನ ಆಗುತ್ತಾ ಆಗುತ್ತಾ ಹೋಗಿಬಿಟ್ಟರೆ ನಾಳೆ ಎಲ್ಲಾ ಕಡೆಗೂ ಇದು ಹಬ್ಬುತ್ತದೆ ಎನ್ನತಕ್ಕಂಥ ಹೆದರಿಕೆ ಹಾಗೂ ಇದು ಒಳ್ಳೆಯದಲ್ಲ ಎನ್ನತಕ್ಕಂಥ ದೃಷ್ಟಿಯಿಂದ ಹೇಳಿರಬಹುದು. ಆ ಕಡೆಗೆ ಮತ್ತು ಈ ಕಡೆಗೆ ತಾವುಗಳು ಏನು ಅಭಿಪ್ರಾಯವನ್ನು ಕೊಟ್ಟಿದ್ದೀರಿ.

ಅದನ್ನು ಸರ್ಕಾರ ಮನ್ನಣೆ ಮಾಡುತ್ತದೆ ಹಾಗೂ ಇದನ್ನು ಸಿ.ಓ.ಡಿ. ಮುಖಾಂತರ ನಾನು ತನಿಖೆಯನ್ನು ಮಾಡಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಬಹಳ ಒಳ್ಳೆಯದು.

ಶ್ರೀಮತಿ ಚಂದ್ರಪ್ರಭಾ ಅರಸ್: ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಕೋರಿಕೆ. ಇದಕ್ಕೆ ಸಂಬಂಧಪಟ್ಟ ಹಾಗೆ ಕೆಲವು ಕಾನೂನು ತೊಡಕು ಮತ್ತು ಸಡಿಲತೆಗಳು ಇವೆ ಇದುವರೆಗೂ ಗಮನಕ್ಕೆ ಬಂದಿರತಕ್ಕಂಥ ವಿಚಾರ. ಇದರ ಬಗ್ಗೆ ತಾವು ಸ್ವಲ್ಪ ಹೆಚ್ಚಿನ ಜಾಗ್ರತೆ ವಹಿಸಿ ಅದನ್ನು ಈ ಕಾನೂನನ್ನು ತಿದ್ದುಪಡಿ ಮಾಡತಕ್ಕಂಥ ಅಗತ್ಯ, ಇದ್ದರೆ ಇದನ್ನು ಈ ಸಂದರ್ಭದಲ್ಲಿ ಮಾಡಲಿಕ್ಕೆ ಬರುತ್ತದೆಯೇ ಎಂದು ತಾವು ಪರಿಶೀಲನೆ ಮಾಡಬೇಕು. ಏಕೆಂದರೆ ಇದು ಬಹಳ. ಗಂಭೀರವಾಗಿರತಕ್ಕಂಥ ವಿಚಾರ. ಸಾಕಷ್ಟು ಕಾಡಿನ ವಸ್ತುಗಳು, ಕಾಡಿನ ಸಂಪತ್ತೆಲ್ಲಾ ನಾಶ ಆಗುತ್ತಿರುವಂಥ ಸಂದರ್ಭದಲ್ಲಿ ಈಗಿನ ಕಾನೂನನ್ನು ತಿದ್ದುಪಡಿ ಮಾಡುವುದು ಒಳ್ಳೆಯದು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಸಭಾಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಇರುವುದರಿಂದ ಒಂದು ವಿಷಯವನ್ನು ಅವರ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಇದನ್ನು ಕೇಳಬೇಕು. ಈಗ ಏನೋ ಒಂದು ಕಛೇರಿಯಲ್ಲಿ ಬಹಳ ಹಿಂದಿನ ಕಾಲದ ವಸ್ತು ಕಳವಾಗಿದೆ ಎಂದು ನನಗೆ ಗೊತ್ತಿದೆ. ಇಲ್ಲಿ ಮಾತು ಕತೆಯನ್ನು ಕೇಳಿದ ಮೇಲೆ ನನಗೆ ಬಹಳ ಗಾಬರಿಯಾಗುತ್ತಿದೆ. ನಮ್ಮ ಹಳೆಯ ಮೈಸೂರು ವಿಭಾಗದಲ್ಲಿ ಸನ್ಮಾನ್ಯ ಅಜೀಜ್ಸೇಠ್ ರವರು ಇಲ್ಲಿಯೇ ಇದ್ದಾರೆ, ಅವರಿಗೆ ಅದರ ಹೆಚ್ಚಿನ ಪರಿಚಯ ಉಂಟು. ಅತ್ಯಂತ ಅಮೂಲ್ಯವಾದಂಥ ಫರ್ನೀಚರ್ಗಳು ಉಂಟು ನಮ್ಮ ಕಛೇರಿಗಳಲ್ಲಿ ಮತ್ತು ನಮ್ಮ ಅತಿಥಿಗೃಹಗಳಲ್ಲಿರುವು ದಕ್ಕಿಂತಲೂ ಅಮೂಲ್ಯವಾದ ಫರ್ನೀಚರ್ಗಳು ಉಂಟು. ಇದು ಏನಾಗಬಹುದು. ಎಂದು ನನಗೆ ಗಾಬರಿಯಾಗುತ್ತಿದೆ. ಏಕೆಂದರೆ ನಮ್ಮ ಅಧಿಕಾರಿಗಳು ಈಗ ಒಂದು ಸೀಮಾತೀತ ಶ್ರೀಮಂತಿಕೆಯ ಮಟ್ಟವನ್ನು ಯಾವುದ್ಯಾವುದೋ ಮಾರ್ಗದಲ್ಲಿ ಮುಟ್ಟುತ್ತಿದ್ದಾರೆ ಯಾವುದೋ ಒಂದು ಮಟ್ಟದಲ್ಲಿ ಮುಟ್ಟಿದ ಮೇಲೆ ಆಂಟಿಕ್ ಪೀಸಸ್ ಬಗ್ಗೆ ಚಪಲ ಪ್ರಾರಂಭವಾಗುವುದು ನಮಗೆ ಈ ದೇಶದಲ್ಲಿ ಕಂಡು ಬರುತ್ತದೆ. ಎಲ್ಲಾ ದೇಶದಲ್ಲಿಯೂ ಇದೇ ಒಂದು ಆಲೋಚನಾ ಕ್ರಮ. ಈ ಆಂಟಿಕ್ವೀಸಸ್ಗಳು ಏನಾಗುತ್ತವೆ. ಎನ್ನುವ ಬಗ್ಗೆ ನನಗೆ ಬಹಳ ಗಾಬರಿಯಾಗತ್ತದೆ. ಅತಿಥಿ ಗೃಹಗಳಲ್ಲಿ ನನಗೆ ಗೊತ್ತಿರುವ ಹಾಗೆ ಒಂದು ಕುರ್ಚಿ, ಒಂದು ಟೇಬಲ್ಲು, ನಾಲ್ಕು ಮಂಚ ಅಂಥ ಅಷ್ಟೇ ಅಲ್ಲಿ ಬರೆದಿರುತ್ತದೆ. ನನಗೆ ತಿಳಿದಿದ್ದ ಹಾಗೆ. ಅದರ ಡಿಸ್ಕ್ರಿಪಷನ್ ಏನೂ ಬರೆದಿರುವುದಿಲ್ಲ. ಅದು ಯಾವ ಕಾಲದ್ದು? ಅದು ಯಾವ ರೀತಿ ಎಂದು ಬರೆದಿರುವುದಿಲ್ಲ. ಆದ್ದರಿಂದ ಈಗ ಅದು ಏನಾಗುತ್ತದೆ ಎಂದು ನಿಜವಾಗಲೂ ನನಗೆ ಗಾಬರಿಯಾಗುತ್ತದೆ. ಆ ಕಾರಣ ಅವರು ಏನೋ ರಿಜಿಸ್ಟರ್ ಒಂದನ್ನು ಮೆಯಿನ್ಟೈನ್ ಮಾಡುತ್ತೀರಲ್ಲಾ, ಎಲ್ಲಿಲ್ಲಿ ಸರ್ಕಾರಿ ವಸ್ತುಗಳು ಯಾವ ಯಾವ ಕಛೇರಿಯಲ್ಲಿ ಇದೆ. ಯಾವ ಯಾವ ಅತಿಥಿ ಗೃಹಗಳಲ್ಲ ಇದೆ. ಅದರ ಚರಿತ್ರೆ ಏನು ಎನ್ನುವ ಹೊಸ ದಾಖಲಿ ಒಂದನ್ನು ಪ್ರಾರಂಭ ಮಾಡದಿದ್ದರೆ ತಕ್ಷಣಕ್ಕೆ ಎಲ್ಲಾ ಅಂಟಿಕ್ ಪೀಸಸ್ ನಮ್ಮ ಅಧಿಕಾರಿಗಳ ಮನೆ ಸೇರುತ್ತವೆ. ಎನ್ನುವುದು ಮಾತ್ರ ನಿಜ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷಿಣಿಯವರೇ, ಒಳ್ಳೆಯ ಸಲಹೆಯನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಡಿಸ್ಕ್ರಿಪಷನ್ ಬಗ್ಗೆ ಹೇಳಿದ್ದಾರೆ. ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದರೆ ಒಳ್ಳೆಯದು ಎಂದು ನನಗನ್ನಿಸುತ್ತದೆ. ಉದಾಹರಣೆಗೆ ಒಂದು ಕುರ್ಚಿ ಇರುತ್ತದ. ಅದಕ್ಕೆ ನಾಲ್ಕು ಕಾಲು ಇರುತ್ತದೆ. ಕಾಲು ಹೇಗೆ ಇತ್ತು ಎನ್ನುವಂಥ ಡಿಸ್ಕ್ರಿಪಷನ್ನು ಆತ ಬರೆಯುತ್ತಾರೆ. ಅದನ್ನು ಇಟ್ಟರೆ ನಾಳೆ ಬಹಳ ಒಳ್ಳೆಯ ಬೆಲೆಯುಳ್ಳಂಥ ಅಂಟಿಕ್ ಪೀಸ್ ಇದ್ದರೆ ಅದನ್ನು ತೆಗೆದು ಕೊಂಡು ಹೋಗಿ ಅದೇ ರೀತಿಯಲ್ಲಿರುವಂಥ ನಾಲ್ಕು ಕಾಲುಇರುವಂಥ ಪೀಸನ್ನು ತೆಗೆದುಕೊಂಡುಬಂದು

ಹಾಕಿ ಯಾವುದೋ ಒಂದು ವುಡ್‌ನ್ನು ತೆಗೆದುಕೊಂಡು ಬಂದು ಇಡತಕ್ಕಂಥ ಸಾಧ್ಯತೆಗಳು ಬರಬಹುದು. ಆದ್ದರಿಂದ ಅವುಗಳ ಫೋಟೋ ತೆಗೆಸಿ ಆಲ್ಬಂಬ್ ನಲ್ಲಿ ಇಟ್ಟರೆ ಬಹಳ ಒಳ್ಳೆಯದೇನೋ ಎಂದು. ಕೇಸ್ ಸ್ವಲ್ಪ ಆಗ ಇಂಪ್ರೂವ್ ಆಗಬಹುದು ನನ್ನ ಪ್ರಕಾರ ಹೇಳುತ್ತಿದ್ದೇನೆ. ತಾವು ಕೊಟ್ಟಂಥ ಸಲಹೆ ಒಳ್ಳೆಯದು. ತಾವು ಹೇಳಿದ್ದು ತಪ್ಪು ಎಂದು ನಾನು ಹೇಳುವುದಿಲ್ಲ.

PROF. M.D.NANJUNDA SWAMY : My suggestion is always open to positive amendments. ತಾವು ಏನು ಬೇಕಾದರೂ ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ : ಪ್ರೊ. ನಂಜುಂಡ ಸ್ವಾಮಿಯವರಿಗೆ ನಾನು ಹೇಳುವುದು ಏನೆಂದರೆ ಇದನ್ನು ಇನ್ನೂ ಸ್ವಲ್ಪ ಇಂಪ್ರೂವ್ ಮಾಡಿಬಿಟ್ಟರೆ ಒಳ್ಳೆಯದು. ಇನ್ನೂ ಅಂತಹ ಸಲಹೆ ಬಂದರೆ ಬಹಳ ಒಳ್ಳೆಯದು. ಅದನ್ನು ಸರ್ಕಾರ ತೀವ್ರವಾಗಿ ಪರಿಶೀಲನೆ ಮಾಡುತ್ತದೆ. ಇದು ಕ್ರಮ ತೆಗೆದುಕೊಳ್ಳಲು ಸೂಕ್ತ ಸಲಹೆ ಆಗಿದೆ. ಏಕೆಂದರೆ ಒಳ್ಳೊಳ್ಳೆಯ ಜಾಗದಲ್ಲಿ ಒಳ್ಳೊಳ್ಳೆಯ ಪೀಸಸ್‌ಗಳು ಇದ್ದಾವೆ. ಸರ್ಕಾರದ್ದವೂ ಕೂಡ ಇದ್ದಾವೆ. ಅದು ಹಾಳಾಗಬಾರದು ಎನ್ನತಕ್ಕ ದೃಷ್ಟಿಯಿಂದ ಹೇಳಿದ್ದೀರಿ. ಅದಕ್ಕೆ ತಮಗೂ ಅಭಿನಂದನೆಗಳು.

ನಿಯಮ 334ರ ಮೇರೆಗೆ

1. ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಸಂಸ್ಥೆಯ ಬಗ್ಗೆ.

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಕಾರ್ಖಾನೆಯು ಕಳೆದ ಹಲವಾರು ವರ್ಷಗಳಿಂದ ನಷ್ಟವನ್ನು ಅನುಭವಿಸುತ್ತಿರುವುದಕ್ಕೆ ಕಾರಣ ಕಾರ್ಖಾನೆಯಿಂದಲೇ ನೇರವಾಗಿ ಮಾರಾಟ ಮಾಡುತ್ತಿರುವುದು ಮತ್ತು ಸೋಪಿನ ತಯಾರಿಕೆಗೆ ಬೇಕಾದ ಕಚ್ಚಾವಸ್ತುಗಳಿಲ್ಲದೆ ನಿಗಧಿತ ಮಟ್ಟದಲ್ಲಿ ಉತ್ಪಾದನೆ ಆಗದೇ ಇರುವುದು. ಹಿಂದೆ ಇದ್ದ ವ್ಯವಸ್ಥೆಯ ಪ್ರಕಾರ ಎಂಎಸ್‌ಐಎಲ್ ಸಂಸ್ಥೆಯ ಮೂಬಕ ಈ ಕಾರ್ಖಾನೆಯ ಉತ್ಪಾದನೆಯನ್ನು ಮಾರಾಟ ಮಾಡಿದರೆ ಶೇಕಡ 3ರಷ್ಟು ನಷ್ಟ ಉಳಿಯುತ್ತದೆ. ಮತ್ತು ಕಚ್ಚಾ ವಸ್ತುಗಳನ್ನು ಕೂಡ ಕೊಂಡುಕೊಳ್ಳಲು ಹಣವನ್ನು ಒದಗಿಸದಿದ್ದರೆ ಈ ಕಾರ್ಖಾನೆಯು ಸುವ್ಯವಸ್ಥಿತ ರೀತಿಯಲ್ಲಿ ನಡೆಯಲು ಕಷ್ಟವಾಗುತ್ತದೆ. ಇದರಿಂದ ಇಲ್ಲಿ ಕೆಲಸ ಮಾಡತಕ್ಕ ಕಾರ್ಮಿಕ ಕುಟುಂಬಗಳು ಮುಂದೆ ತೊಂದರೆಯನ್ನು ಅನುಭವಿಸಬೇಕಾಗುತ್ತದೆ.

ಆದ್ದರಿಂದ, ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹಿಂದೆ ಇದ್ದಂಥ ರೀತಿಯಲ್ಲೇ ಈ ಕಾರ್ಖಾನೆಯ ಉತ್ಪಾದನೆಯನ್ನು ಮಾರಾಟ ಮಾಡಲು ಎಂಎಸ್‌ಐಎಲ್‌ಗೆ ವಹಿಸಿಕೊಟ್ಟು ಈ ಕಾರ್ಖಾನೆ ವ್ಯವಸ್ಥಿತಿವಾಗಿ ನಡೆದುಕೊಂಡು ಹೋಗಲು ಮತ್ತು ಕಳವಳಕ್ಕೊಳಗಾಗಿರುವ ಇಲ್ಲಿಯ ಕಾರ್ಮಿಕರ ಹಿತದೃಷ್ಟಿಯನ್ನು ಕಾಪಾಡುವಂತೆ ಕಾರ್ಖಾನೆಯ ಆಡಳಿತವರ್ಗಕ್ಕೆ ಆದೇಶವನ್ನು ನೀಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ಕಂಪನಿಯ ಬಗ್ಗೆ ಒಂದು ನಿಲುವನ್ನು ನಾನು ಇತ್ತೀಚಿನ ಬಜೆಟ್ - ಭಾಷಣದಲ್ಲಿ ಹೇಳಿದಾಗ, ಆದರ ಹಿನ್ನೆಲೆಯನ್ನು ಹೇಳತಕ್ಕ ಅವಶ್ಯಕತೆ ಇದೆ ಎಂದು ನಾನು ಭಾವಿಸಿದ್ದೇನೆ. ಈ ರೀತಿಯ ಅನೇಕ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ಗಳು ಇವೆ. ಬಹಳ ವರ್ಷಗಳಿಂದ ನಷ್ಟದಲ್ಲಿವೆ. ಸುಮಾರು 40-50 ಕೋಟಿ ರೂಪಾಯಿಗಳಷ್ಟು ನಷ್ಟದಲ್ಲಿರುವಂತಹ ಮೈಸೂರು ಸೋಪ್ಸ್ ಅಂಡ್ ಡಿಟರ್‌ಜೆಂಟ್‌ಗೆ ಇದು ಸಂಬಂಧಪಟ್ಟಿದ್ದು. ಇತ್ತೀಚಿನ ನಮ್ಮ ನೀತಿಗೆ ಅನುಸಾರವಾಗಿ ಯಾವುದನ್ನು ನಾವು ನಮ್ಮ ಕೈಯಿಂದ ತಪ್ಪಿಸಿಕೊಳ್ಳಬೇಕು. ಟ್ಯಾಕ್ಸ್ ಪೇಯರ್ಸ್ ಹಣ ಹಾಳಾಗದ ಹಾಗೆ ನೋಡಿಕೊಳ್ಳಬೇಕು ಅನ್ನತಕ್ಕದ್ದು Suppose we decide to dis-invest our shares in all those Companies, I have already given a clue in my budget speech also. ಅದರ ಬಗ್ಗೆ ನಾನು